www.prepp.in

Prepp
Your Personal Exams Guide

**Lang. Code : 07**

इस पुस्तिका में **20** पृष्ठ हैं ।
This booklet contains **20** pages.

# ATA-19-I

**प्रश्न-पत्र I / PAPER I**

**कन्नड़ भाषा परिशिष्ट**

**Kannada Language Supplement**

**भाग IV & V / PART IV & V**

**परीक्षा पुस्तिका संकेत**
**Test Booklet Code**

**A**

**परीक्षा पुस्तिका संख्या**
**Test Booklet No.**

**इस परीक्षा पुस्तिका को तब तक न खोलें जब तक कहा न जाए ।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें ।**
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें । / For instructions in Kannada see Page 2 of this Booklet.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं** ।
2. परीक्षार्थी भाग I, II, III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से ।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं । भाषा परिशिष्टों को आप अलग से माँग सकते हैं ।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें ।
5. इस भाषा पुस्तिका का **संकेत** है **A** । यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है । अगर यह भिन्न हो तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा I - (कन्नड़) (प्र. 91 से प्र. 120)
   भाग-V : भाषा II - (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं । इस परीक्षा पुस्तिका में केवल कन्नड़ भाषा से संबंधित प्रश्न दिए गए हैं । **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए । जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए ।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा I (भाग-IV) में चुनी गई भाषा से भिन्न हो ।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें ।
10. सभी उत्तर केवल OMR उत्तर पत्र पर ही अंकित करें । अपने उत्तर ध्यानपूर्वक अंकित करें । उत्तर बदलने हेतु श्वेत रंजक का प्रयोग निषिद्ध है ।

## *INSTRUCTIONS FOR CANDIDATES*

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Parts I, II, III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page / marking responses in the Answer Sheet.
5. The CODE for this Language Booklet is **A**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language I - (Kannada) (Q. 91 to Q. 120)
   Part-V : Language II - (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part -V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capitals) :
अनुक्रमांक : (अंकों में) ____________________
Roll Number : in figures
: (शब्दों में) ____________________
: in words
परीक्षा केन्द्र (बड़े अक्षरों में) : ____________________
Centre of Examination (in Capitals) :
परीक्षार्थी के हस्ताक्षर : ____________ निरीक्षक के हस्ताक्षर : ____________
Candidate's Signature : Invigilator's Signature :
Facsimile signature stamp of
Centre Superintendent ____________________

A

www.prepp.in

Prepp Your Personal Exams Guide



**Lang. Code : 07**

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

# ATA-19-I

## ಪ್ರಶ್ನೆ ಪತ್ರಿಕೆ I
## ಕನ್ನಡ ಭಾಷಾ ಪೂರಕ
## ಭಾಗ IV & V

ಪ್ರಶ್ನೆ ಪುಸ್ತಿಕೆ ಸಂಕೇತ

**A**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 & 20) ಗಮನವಿಟ್ಟು ಓದಿರಿ.**

**ಪರೀಕ್ಷಾರ್ಥಿಗಳಿಗೆ ಸೂಚನೆಗಳು:**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) ಅಥವಾ ಭಾಗ V(ಭಾಷೆ II) ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II, III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ **ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **A** ಆಗಿದೆ. ಉತ್ತರ ಪತ್ರಿಕೆಯ ಪುಟ-2 ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿವೆ IV ಮತ್ತು V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ 1 ಅಂಕ :

   ಭಾಗ IV : ಭಾಷಾ I — (ಕನ್ನಡ) (ಪ್ರಶ್ನೆ 91 ರಿಂದ 120)

   ಭಾಗ V : ಭಾಷಾ II — (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ IV ರಲ್ಲಿ ಭಾಷೆ I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ V ರಲ್ಲಿ ಭಾಷೆ II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ I ಮತ್ತು/ಅಥವಾ II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು - ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. ಪರೀಕ್ಷಾರ್ಥಿ ಭಾಗ V (ಭಾಷೆ II) ಕ್ಕಾಗಿ, ಭಾಷೆ I (ಭಾಗ IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) ______________________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) ______________________________

: (ಅಕ್ಷರಗಳಲ್ಲಿ) ______________________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) ______________________________

ಪರೀಕ್ಷಾರ್ಥಿಯ ಸಹಿ ____________________ ನಿರೀಕ್ಷಕರ ಸಹಿ ____________________

Facsimile signature stamp of

Centre Superintendent : ______________________________

www.prepp.in



ಅಭ್ಯರ್ಥಿಗಳು ಕನ್ನಡವನ್ನು ಭಾಷೆ – **I** ಎಂದು ಆರಿಸಿ-ಕೊಂಡಿದ್ದರೆ ಮಾತ್ರ ಭಾಗ – **IV** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **91 – 120)** ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only

www.prepp.in



## PART – IV
## ಭಾಷೆ – I
## ಕನ್ನಡ

**IMPORTANT :** ಅಭ್ಯರ್ಥಿಗಳು ಕನ್ನಡವನ್ನು ಭಾಷೆ – I ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ – IV ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 91-120) ಉತ್ತರಿಸಬೇಕು.

ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91-99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.

ಕವಿಗಳ ಕವನದಂತೆಯೇ ಗುಬ್ಬಚ್ಚಿಯ ಗೂಡು ಅನನ್ಯವಾದದ್ದು. ಮನುಷ್ಯ ಕಟ್ಟಲು ಆಗದಂಥದು. ಗೂಡಿನ ಹುಲ್ಲು ಕಡ್ಡಿಗಳಂತೆಯೇ ಕವಿಯ ಮಾತುಗಳು ಮತ್ತು ಅನುಭವ ಸರಳವಾದವು, ಬದುಕಿನ ಅತ್ಯಂತ ಕೆಳಸ್ತರದಿಂದ ಸಂಗ್ರಹಿತವಾದವು. ಜನರ ಹೃದಯದ ಮಾತುಗಳಿಗೆ ಬದಲು ಪುಸ್ತಕಗಳ ಮಾತುಗಳನ್ನೇ ಬಳಸಿದವರು, ಕಡು ಬಡವನ ಅಳಲಿಗೆ ಬದಲು ರಾಜಮಹಾರಾಜರ ಪ್ರತಾಪಗಳನ್ನು ವರ್ಣಿಸುವವರು, ಆಪ್ತ ದನಿಗೆ ಬದಲು ಡಂಗುರದ ವರಸೆಗೆ ಬಲಿಯಾದವರು ಕವಿಗಳಾಗಿ ವಿಫಲವಾಗಿದ್ದಾರೆ; ಅಥವಾ, ಸತ್ಯಕ್ಕೆ ಹೆಚ್ಚು ಹತ್ತಿರವಾಗಬೇಕೆಂದರೆ, ಪುಸ್ತಕಗಳ ದೊಡ್ಡ ದೊಡ್ಡ ಮಾತುಗಳ ಹಿಂದಿನ ಅಪಸ್ವರವನ್ನು, ರಾಜ ಮಹಾರಾಜರ ಮೂಲಭೂತ ತಬ್ಬಲಿ ದನಿಯನ್ನು, ಡಂಗುರದ ಬೊಬ್ಬೆಯ ನಿರರ್ಥಕತೆಯನ್ನು ಹಿಡಿದವರು ಮಾತ್ರ ಕವಿಗಳಾಗಿದ್ದಾರೆ. ಕವಿಯೊಬ್ಬ ವಿಚಿತ್ರ ವ್ಯಕ್ತಿ: ಹುಡುಗ ಮನೆ ಕಟ್ಟಿಕೊಳ್ಳಲು ಗುಬ್ಬಚ್ಚಿಗೆ ಹೇಳಿದಾಗ ಗುಬ್ಬಚ್ಚಿಯ ದಿಗ್ಭ್ರಮೆಯಲ್ಲಿ ಕವಿಯ ಆಳದ ದಿಗಿಲಿದೆ. "ನಾನು ಬಡವಿ, ಆತ ಬಡವ, ಒಲವೆ ನಮ್ಮ ಬದುಕು" ಎಂದು ಹೇಳುವ ಬೇಂದ್ರೆಯ ಪ್ರೇಯಸಿಗೆ ಅವನೆ ರಂಗಶಾಲೆ, ಅವನೆ ಮೆಚ್ಚಿನೋಲೆ.

ಕಾಲವನ್ನು ಪಕ್ಷಿಗೆ ಹೋಲಿಸುತ್ತಾರೆ, ಪ್ರಾಣವನ್ನು ಪಕ್ಷಿಗೆ ಹೋಲಿಸುತ್ತಾರೆ, ಇದೆಲ್ಲ ಮಾಡುವವರು ಕವಿಗಳೇ. ಆದರೆ ಇಲ್ಲಿ ಒಂದು ಅರ್ಥಪೂರ್ಣ ವ್ಯತ್ಯಾಸ ಗುರುತಿಸಬೇಕು. ಗುಬ್ಬಚ್ಚಿಯ ಗೂಡನ್ನು, ಮನುಷ್ಯ ತನ್ನೆಲ್ಲ ಜಾಣತನ ಬಳಸಿ ಕಟ್ಟಿಬಿಟ್ಟಾನು, ಆದರೆ ಆತ ಅದರಲ್ಲಿ ಜೀವಿಸಲಾರ. ಹಕ್ಕಿಗಳ ಹಾಡು ಇಂಪಾಗಿರಬಹುದು, ಆದರೆ ಮನುಷ್ಯ ಅದನ್ನು ಅನುಕರಿಸಿದರೆ ಅದು ಹಾಡಾಗಲಾರದು. ಹಕ್ಕಿಗಳಂತೆ ಈತ ವಿಮಾನದಲ್ಲಿ ಹಾರಬಹುದು, ಆದರೆ ಅದು ಹಕ್ಕಿಯ ಹಾರಾಟ ಅನ್ನಿಸಿಕೊಳ್ಳುವುದಿಲ್ಲ. ಆದ್ದರಿಂದಲೇ ಮನುಷ್ಯನೊಂದು ನಿಗೂಢ ರಹಸ್ಯ. ಆತನ ದೇಹದ ರಚನೆಯನ್ನು ನೋಡಿದರೆ ಅವನು ಹಾರಲಾರ, ಹಾಡಲಾರ, ಹಕ್ಕಿಗಳ ಚಾಕಚಕ್ಯತೆಯಿಂದ, ಅಷ್ಟೇ ವೇಳೆಯಲ್ಲಿ ಗೂಡು ಕಟ್ಟಲಾರ. ಆದರೂ ಆತ ಇವೆಲ್ಲವುಗಳನ್ನು ಮಾಡಿಬಿಟ್ಟು ಹಕ್ಕಿಯ ಸರಳತೆಯ ಬಗ್ಗೆ ನಿಬ್ಬೆರಗಾಗುತ್ತಾನೆ. ಕ್ರೌಂಚ ಪಕ್ಷಿಯ ಧ್ವನಿ ಕೇಳಿದ ವಾಲ್ಮೀಕಿ ಮಾತ್ರ ರಾಮಾಯಣ ರಚಿಸಬಲ್ಲ. ರಾಮಾಯಣದ ಅಗತ್ಯವೇ ಇಲ್ಲದ ಹಕ್ಕಿಗಳು ದ್ವೇಷ, ಸ್ನೇಹ, ಸಂಭೋಗ, ವಂಶದ ಬೆಳವಣಿಗೆ– ಎಲ್ಲದರಲ್ಲಿ ತೊಡಗಿ ಸುಮ್ಮನಿರುತ್ತವೆ. ರಾಮಾಯಣ ರಚಿಸಲು ಬೇಕಾದ ಮಾತು, ಛಂದಸ್ಸು, ಮೌನ, ಏಕಾಗ್ರತೆಯನ್ನು ಬೆಳೆಸಿಕೊಂಡ ಕವಿ ಮನುಕುಲಕ್ಕೆ ಒಂದು ಕತೆಯನ್ನೇ, ಪರಂಪರೆಯನ್ನೇ ನೀಡುತ್ತಾನೆ.

ಮೌನ ಮುಖ್ಯವೇ ? ಸಂಗೀತದಲ್ಲಿ, ನಾಟಕದಲ್ಲಿ ಮೌನ ಸದ್ದಿನಷ್ಟೇ ಮುಖ್ಯ. ಆದರೆ ಕವನದಲ್ಲಿ ? ಆರೇ ಪದಗಳ ಮೂರುಸಾಲಿನಲ್ಲಿ ಜಪಾನಿನ ಹಯಕು ಕವನ ಮೈಗೊಳ್ಳುತ್ತದೆ. ಕುಮಾರವ್ಯಾಸನ ಷಟ್ಪದಿಯ ಒಂದು ಪದ್ಯವನ್ನು ವಿವರಿಸ ಹೋದರೆ ಅನೇಕ ಪುಟಗಳೇ ಬೇಕಾಗುತ್ತವೆ – ಶೇಕ್ಸ್‌ಪಿಯರ್‌ನ 'ಕಿಂಗ್ ಲಿಯರ್'ನ ಎಂಟು ನುಡಿ ಸಂಪುಟಗಳನ್ನೇ ಹೇಳುತ್ತದೆ. ಮೊನ್ನೆ, ನಾನು ನೋಡಿದ ಒಂದು ನಾಟಕದಲ್ಲಿ ಹಲವು ಜನ ಮುಖ್ಯ ಪಾತ್ರಧಾರಿಯ

www.prepp.in
Prepp Your Personal Exams Guide


ಮಾತುಗಳಿಗಾಗಿ ಕಾಯುತ್ತಿದ್ದರು. ಪಾತ್ರಗಳು ಮಾತಾಡುತ್ತಿದ್ದವು. ಆದರೆ ಅಲ್ಲೊಂದು ಆಶ್ಚರ್ಯ ಕಾದಿತ್ತು. ಮುಖ್ಯ ಪಾತ್ರಧಾರಿ ಸುಮ್ಮನೆ ಹೋಗಿ ಮೌನದಲ್ಲಿ ಗಂಟೆ ಬಾರಿಸಿದ. ಆ ಗಂಟೆಯ ಧ್ವನಿ ಪ್ರೇಕ್ಷಕರಲ್ಲಿ ರೋಮಾಂಚನವನ್ನೇ ಮೂಡಿಸಿತು.

ಆದ್ದರಿಂದಲೇ ಕವಿ ಕೆಲವೇ ಮಾತುಗಳನ್ನು ಬಳಸಿಕೊಂಡು ಮಾತುಮಾತಿನ ನಡುವೆ ಮೌನಿಯಾಗುತ್ತಾನೆ. ಅದೇ ಛಂದಸ್ಸು, 'ವಾರಿನೋಟ ಹಾರುತ್ತಿತ್ತೊ ಹೋಳೀ ಮ್ಯಾಗ | ಹೊಸಾ ಹರೆ ಈಸತಿತ್ತೊ ಹೋಳೀಯಾಗ |' ಎನ್ನುವ ಬೇಂದ್ರೆಯವರ ಕವನವನ್ನು ಹಾಡಬಹುದು, ಈ ಹಾಡಿನಲ್ಲಿ ಮೌನವಿದೆ. ಯಾರ ವಾರಿನೋಟ, ಯಾಕೆ ಹಾರುತ್ತಿತ್ತು, ಎಂಬುದೆಲ್ಲ ಇಲ್ಲಿ ಮೌನ. ಹರಯದ ಜನರ ಆಕಾರ ಕೂಡ ಇಲ್ಲಿ ನಿಶ್ಯಬ್ದ. ಮೂರು ಒತ್ತುಗಳುಳ್ಳ ಈ ಸಾಲುಗಳ ಸದ್ದಿನಲ್ಲಿ ಕೂಡ ನಿಶ್ಯಬ್ದ ಕೆಲಸ ಮಾಡುತ್ತದೆ.

'ಹಕ್ಕಿ ಹಾರುತಿದೆ ನೋಡಿದಿರಾ ?' ಎಂದು ಕೇಳುವ ಬೇಂದ್ರೆಯವರಾಗಲಿ, 'ಮನೆಯೊಳಗೆ ಮನೆಯೊಡೆಯನಿಲ್ಲ' ಎನ್ನುವ ಬಸವಣ್ಣನಾಗಲಿ, 'ಎಲ್ಲರಂಥವನಲ್ಲ ನನ ಗಂಡ' ಎನ್ನುವ ಶಿಶುನಾಳರಾಗಲಿ ಹಕ್ಕಿ, ಮನೆ, ಗಂಡಂದಿರನ್ನು ನೋಡಿದವರು; ಅವರ ವಹಿವಾಟನ್ನು, ಗುಣ ಧರ್ಮವನ್ನು ಸೂಕ್ಷ್ಮವಾಗಿ ಗಮನಿಸಿದವರು; ಈ ಹುಲ್ಲನ್ನು ಬಳಸಿಕೊಂಡು ತಮ್ಮ ಕವನದ ಗೂಡನ್ನು ಕಟ್ಟುವವರು, ಈ ಕವನದ ಗೂಡಿನಲ್ಲಿ ಗುಬ್ಬಚ್ಚಿಯ ಹೃದಯ ಸ್ಪಂದನವನ್ನು ಗುರುತಿಸಿದವರು.

ಆದ್ದರಿಂದಲೇ ಎಲ್ಲ ಕವನಗಳಲ್ಲಿನ ಸಿದ್ಧಾಂತ, ಬದ್ಧತೆ ಮುಖ್ಯವಾಗಿ ಬದುಕಿಗೆ, ಪ್ರೀತಿಗೆ ಮಾತ್ರ ಬದ್ಧ. ಈ ಸಿದ್ಧಾಂತಗಳು, ಒಳ್ಳೊಳ್ಳೆಯ ಯೋಚನೆಗಳೆಲ್ಲ ಕವಿಯ ಆಟದ ಸಾಮಾನುಗಳು ಮಾತ್ರ. ನೆರೂಡ, ಬ್ರೆಕ್ಟ್ ತಮ್ಮ ಸಮತಾವಾದದ ಬಗ್ಗೆ ಎಷ್ಟು ಹೇಳಿಕೊಂಡರೂ ಅವರ ಕವನಗಳು ಕೆಟ್ಟು ಹೋಗಿರುವ ಭಾಷೆಯನ್ನು ಹೃದಯ ಸ್ಪಂದನದ ಭಾಷೆಯ ಹತ್ತಿರ ತರುವುದಕ್ಕಾಗಿ, ಅಸಮಾನತೆ, ಅನ್ಯಾಯಗಳಿಂದ ಕೊಳೆತು ಹೋಗಿರುವ ಸಮಾಜಕ್ಕೆ ಗುಬ್ಬಚ್ಚಿಯ ಮುಗ್ಧ ನಿಸ್ವಾರ್ಥತೆ, ಸ್ವಾಭಿಮಾನದ ನಿಲುವು ತರುವುದಕ್ಕಾಗಿ, ಸಂಕೀರ್ಣಗೊಂಡು ಮನುಷ್ಯನನ್ನು ತನ್ನ ಅರಮನೆಯಲ್ಲಿ, ಗುಡಿಸಿಲಲ್ಲಿ ತಬ್ಬಲಿಯನ್ನಾಗಿ ಮಾಡುವ ಪರಿಸರಕ್ಕೆ ಮಾತು ಮೀರಿದ ಪ್ರೀತಿ ತರುವುದಕ್ಕಾಗಿ ನಡೆಸುವ ಪ್ರಯತ್ನಗಳು.

ಕವನವೆಂದರೆ ಏನೆಂದು ಗೊತ್ತಾಯಿತೆ ? ಗುಬ್ಬಚ್ಚಿಯಂತೆ ಹಾಡಲಾರದ, ಬದುಕಲಾರದ ಮನುಷ್ಯ ತನ್ನದೇ ಆದ ರೀತಿಯಲ್ಲಿ ಆಡುವ, ಮಾತಾಡುವ, ಮೌನವಾಗಿರುವ ಪ್ರಯತ್ನ.

**91.** ಕಾವ್ಯ ಸಫಲವಾಗುವುದು ಯಾವಾಗ ?

(1) ಜನಸಾಮಾನ್ಯರ ಬದುಕನ್ನು ಅಭಿವ್ಯಕ್ತಿಸಿದಾಗ

(2) ರಾಜಮಹಾರಾಜರ ಕತೆಯನ್ನು ವರ್ಣಿಸಿದಾಗ

(3) ಹೊಗಳಿಕೆಯ ಕಾವ್ಯ ಬರೆದಾಗ

(4) ಗ್ರಂಥಸ್ಥ ಭಾಷೆಯನ್ನಷ್ಟೇ ಬಳಸಿದಾಗ

**92.** 'ಕವನ' ಎಂಬ ಗೂಡನ್ನು ಯಾರು ಕಟ್ಟಲು ಸಾಧ್ಯ :

(1) ವ್ಯಕ್ತಿ ಗುಣಗಳನ್ನು ಗಮನಿಸದವನು

(2) ಮನುಷ್ಯ ಸಂಬಂಧಗಳನ್ನು ಅರಿತವನು

(3) ಇತರರ ಭಾವನೆಗಳಿಗೆ ಸ್ಪಂದಿಸುವವನು

(4) ಚೆನ್ನಾಗಿ ಓದಿಕೊಂಡವನು

**93.** ಸಿದ್ಧಾಂತಗಳ ಬಗ್ಗೆ ಲೇಖಕರ ನಿಲುವೇನು ?

(1) ಮೆಚ್ಚುಗೆ

(2) ವಾಗ್ವಾದ

(3) ಸ್ವೀಕಾರ

(4) ಅನುಮಾನ

**94.** ಮನುಷ್ಯ ಮೂಲಭೂತವಾಗಿ ಏನು ?

(1) ತಟಸ್ಥ

(2) ಅಸಹಾಯಕ

(3) ಶಕ್ತಿವಂತ

(4) ದುರ್ಬಲ

www.prepp.in



95. ಕಾವ್ಯದಲ್ಲಿ ಮಾತಿನಷ್ಟೇ ಮುಖ್ಯವಾದದ್ದು ಯಾವುದು ?
(1) ಅಲಂಕಾರ
(2) ಧ್ವನಿ
(3) ವಿವರಣೆ
(4) ಮೌನ

96. 'ಗುಬ್ಬಚ್ಚಿಯ ಗೂಡು' ಎಂಬುದನ್ನು ಯಾವ ಅರ್ಥದಲ್ಲಿ ಬಳಸಲಾಗಿದೆ :
(1) ದೃಷ್ಟಾಂತ
(2) ಉತ್ಪ್ರೇಕ್ಷೆ
(3) ರೂಪಕ
(4) ಉಪಮೆ

97. 'ವರಸೆ' ಪದದ ಅರ್ಥ :
(1) ಅಭಿನಯ
(2) ಪಟ್ಟು
(3) ನಡಿಗೆ
(4) ಹೊಡೆತ

98. ಕ್ರೌಂಚ ಪಕ್ಷಿಯ ಅಳಲನ್ನು ಆಲಿಸಿ ಕಾವ್ಯ ಬರೆದವನು :
(1) ವಾಲ್ಮೀಕಿ
(2) ಹೋಮರ್
(3) ಬೇಂದ್ರೆ
(4) ನೆರೂಡ

99. ಲೇಖನದಲ್ಲಿ ಯಾವ ಪ್ರಶ್ನೆಗೆ ಉತ್ತರವನ್ನು ಹುಡುಕಲಾಗಿದೆ :
(1) ಬದುಕು ಎಂದರೇನು ?
(2) ಕವನ ಎಂದರೇನು ?
(3) ಸಿದ್ಧಾಂತ ಎಂದರೇನು ?
(4) ಕಲೆ ಎಂದರೇನು ?

ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ: **100-105**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.

ನನ್ನ ಕೈಯ ಹಿಡಿದಾಕೆ ಅಳು ನುಂಗಿ ನಗು ಒಮ್ಮೆ
ನಾನೂನು ನಕ್ಕೇನs
ಇಲದಿರಕ ನಿನ ಅಳುವ ಹುಚ್ಚು ಹಳ್ಳದ ಕಳ್ಳ
ಹುದುಲಾಗ ಸಿಕ್ಕೇನs

ಜಗದಾಗ ಯಾವಾಗ ನೆರಳು ಬೆಳಕಿನ್ಯಾಗ
ಹಗಲಿರುಳು ಇದ್ದಾವಾ
ಎದ್ದೇನs ಬಿದ್ದೇನs ಕತ್ತಲು ಬಿಸಲೇನ
ನಕ್ಕಾವಾ ಗೆದ್ದಾವಾ !

ಹುಸಿನಗುತ ಬಂದೇವ ನಸುನಗುತ ಬಾಳೋಣ
ತುಸುನಗುತ ತೆರಳೋಣ
ಬಡ ನೂರು ವರುಷಾನ ಹರುಷಾದಿ ಕಳೆಯೋಣ
ಯಾಕಾರ ಕೆರಳೋಣ !

ಬಡತನ ಒಡೆತನ ಕಡೆತನಕುಳಿದಾವೇನ
ಎದೆಹಿಗ್ಗು ಕಡೆಮುಟ್ಟ
ಬಾಳಿನ ಕಡಲಾಗ ಅದನ ಮುಳುಗಿಸಬ್ಯಾಡ
ಕಡೆತನಕ ಹಿಡಿಹುಟ್ಟ !

100. ಕಷ್ಟ – ಸುಖ ಎನ್ನುವುದು :
(1) ನೆರಳು – ಬೆಳಕಿನ ಹಾಗೆ
(2) ಹೂವು – ಮುಳ್ಳಿನ ಹಾಗೆ
(3) ಹಳ್ಳ – ಕೊಳ್ಳದ ಹಾಗೆ
(4) ಭೂಮಿ – ಆಕಾಶದ ಹಾಗೆ

101. ಬದುಕಿನಲ್ಲಿ ಯಾರು ಗೆಲ್ಲುತ್ತಾರೆ :
(1) ಕೆರಳಿದವರು
(2) ನಕ್ಕವರು
(3) ಅಳುವವರು
(4) ಅಳುಕುವವರು

www.prepp.in



102. ಬಾಳಿನಲ್ಲಿ ಕಡೆಯವರೆಗೂ ಉಳಿಯುವುದು :
(1) ಬಡತನ
(2) ಶ್ರೀಮಂತಿಕೆ
(3) ಅಧಿಕಾರ
(4) ಮನಸ್ಸಂತೋಷ

103. 'ಹುದುಲ' ಎಂಬುದರ ಅರ್ಥ :
(1) ಕಾಲುವೆ
(2) ಕೆಸರು
(3) ಸುಳಿ
(4) ಮಣ್ಣು

104. 'ಕಡೆಮುಟ್ಟ' ಎಂದರೆ :
(1) ಕೊನೆಯವರೆಗೂ
(2) ಬಡತನ ಇರುವವರೆಗೂ
(3) ಸಂಬಂಧ ಇರುವವರೆಗೂ
(4) ನಗು ಇರುವವರೆಗೂ

105. ಬದುಕನ್ನು ಗೆಲ್ಲುವುದು ಎಂದರೆ :
(1) ದುಃಖಿಸುವುದು
(2) ಪಲಾಯನ ಮಾಡುವುದು
(3) ಕಷ್ಟಗಳನ್ನು ಎದುರಿಸುವುದು
(4) ಉದಾಸೀನಿಯಾಗಿರುವುದು

106. ಮಾತೃ ಭಾಷಾ ಮೂಲವಾದ ಬಹುಭಾಷಿಕತೆ-ಯನ್ನು ಏನೆಂದು ಕರೆಯುತ್ತಾರೆ ?
(1) ಕೇವಲ ಮಾತೃಭಾಷೆಯನ್ನು ಕಲಿಯುವುದು.
(2) ಮಾತೃಭಾಷೆಯ ಮೂಲಕ ಕಲಿಯುವುದು.
(3) ಮಾತೃಭಾಷೆಯನ್ನು ಮೊದಲು ಕಲಿತು, ನಂತರ ಹೆಚ್ಚು ಭಾಷೆಗಳನ್ನು ಕಲಿಯುವುದು.
(4) ಬಹು ಭಾಷೆಗಳನ್ನು ಮತ್ತು ವಿದೇಶಿ ಭಾಷೆಗಳನ್ನು ಮಾತೃಭಾಷೆಯಾಗಿ ಕಲಿಯುವುದು.

107. ಶಾಲಾ ಶಿಕ್ಷಣ ನೀತಿಯಲ್ಲಿ ಭಾಷೆಯನ್ನು ಹೀಗೆ ತಿಳಿಯಲಾಗುತ್ತದೆ :
(1) ಬಹುಭಾಷಿಕ ಶಿಕ್ಷಣ
(2) ಶಿಕ್ಷಣದಲ್ಲಿ ಭಾಷೆ
(3) ಮಾತೃಭಾಷೆ ಆಧಾರಿತ ಬಹುಭಾಷಿಕತೆ
(4) ತ್ರಿಭಾಷಾ ಸೂತ್ರ

108. ಸಂಪೂರ್ಣ ಭಾಷಾ ವಿಧಾನವೆಂದರೆ
(1) ಕಲಿಯುವವರು ಭಾಷೆಯಲ್ಲಿ ಅಕ್ಷರ, ಧ್ವನಿಯಿಂದ ಪದಗಳನ್ನು, ಪದಗುಚ್ಛ-ಗಳನ್ನು, ಮತ್ತು ನಂತರ ವಾಕ್ಯಗಳನ್ನು ಕಲಿಯುತ್ತಾರೆ ಎಂದು ತಿಳಿಯುವುದು.
(2) ಕಲಿಯುವವರು ಭಾಷೆಯಲ್ಲಿ ಭಾಷಾ ಘಟಕಗಳಿಂದ ಭಾಷೆಯನ್ನು ಕಲಿಯುತ್ತಾರೆ ಮತ್ತು ಸಣ್ಣ ಘಟಕಗಳಾದ ಧ್ವನಿಗಳು ಮತ್ತು ಅಕ್ಷರಗಳನ್ನು ತಿಳಿಯುತ್ತಾರೆ ಎಂದು ತಿಳಿಯುವುದು.
(3) ಭಾಷಾ ಕಲಿಕೆಯು ಅತ್ಯಂತ ಚಿಕ್ಕ ಘಟಕವಾದ ವರ್ಣಮಾಲೆಯ ಅಕ್ಷರಗಳಿಂದ ಪ್ರಾರಂಭವಾಗುತ್ತದೆ ಎಂದು ತಿಳಿಯುವುದು.
(4) ಎಲ್ಲ ಭಾಷೆಗಳನ್ನು ಒಂದೇ ವಿಧಾನದಲ್ಲಿ ಕಲಿಯಲಾಗುತ್ತದೆ ಎಂದು ತಿಳಿಯುವುದು.

109. ಭಾಷೆಯನ್ನು ಕಲಿಸುವ ಯಾವ ವಿಧಾನವು 'ಸ್ಮರಣ ಕ್ರಿಯೆ'ಯನ್ನು ಭಾಷಾ ಕಲಿಕೆಯ ಯಾವ ವಿಭಾಗವೆಂದು ಹೇಳುತ್ತದೆ ?
(1) ಸಂರಚನಾತ್ಮಕ ವಿಧಾನ (structural approach)
(2) ವ್ಯಾಕರಣ ಭಾಷಾಂತರ ವಿಧಾನ
(3) ಸಂವಹನ ವಿಧಾನ
(4) ಸಂಪೂರ್ಣ 'ಭೌತಿಕ ಪ್ರತಿಕ್ರಿಯೆ' (total physical response)

www.prepp.in



110. ಕಾವ್ಯ ಎನ್ನುವವಳು ಭಾಷಾ ಅಧ್ಯಾಪಿಕೆ. ಅವಳು ವಿಭಿನ್ನ ಆಶಯಗಳಿಗೆ ಅನುಗುಣವಾಗಿ ಪದಗಳನ್ನು ಹುಡುಕುವಂತೆ ಹಾಗೂ ಸಂಗತವಾಗುವಂಥ (be friend) ಪದಗಳನ್ನು ಕೊಡುವಂತೆ ಹೇಳುತ್ತಾಳೆ (ಅಂದರೆ – ಪದಗಳು ಮೊದಲ ಪದದ ಜೊತೆಗೂ, ಪದದ ನಂತರದಲ್ಲೂ ಜೊತೆಗೂಡಿ ಹೋಗುವಂಥವು) ಈ ವಿಧಾನವನ್ನು ಏನೆಂದು ಕರೆಯುತ್ತಾರೆ ?

(1) ಪದ ಸಮ್ಮಿಳನ (collocation)

(2) ಶಬ್ದ ಸಮುಚ್ಚಯ (word web)

(3) ಶಬ್ದದ ಆಟ (word play)

(4) ಪದ ನಿರ್ಮಾಣ (word formation)

111. ಕಲಿಯುವವರ ಭಾಷಾ ಸಾಮರ್ಥ್ಯವನ್ನು ಪರೀಕ್ಷಿಸಲು ಶಿಕ್ಷಕಿಯು ಒಂದು ಪ್ರಶ್ನೆಯನ್ನು ಸಿದ್ಧಗೊಳಿಸುತ್ತಾಳೆ. ಒಂದು ಪ್ಯಾರಾಗ್ರಾಫ್‌ನಲ್ಲಿ ಐದನೆಯ ಪದವನ್ನು ಅವಳು ತೆಗೆದುಹಾಕಿ, ಕಲಿಯುವವರಿಗೆ ತಪ್ಪಿಹೋದ ಪದಗಳನ್ನು ಜೋಡಿಸುವಂತೆ ಹೇಳುತ್ತಾಳೆ. ಈ ಪರೀಕ್ಷಾ ವಿಧಾನವನ್ನು ಏನೆಂದು ಕರೆಯುತ್ತಾರೆ ?

(1) ಓದುವ ಸಾಮರ್ಥ್ಯಗ್ರಹಣ

(2) ಶಬ್ದಕೋಶದ ಸಾಮರ್ಥ್ಯ ಪರೀಕ್ಷೆ

(3) ಖಾಲಿ ಜಾಗ ತುಂಬುವುದು

(4) ಕ್ಲೋಜ್ ಪರೀಕ್ಷೆ (ಖಾಲಿ ಜಾಗದಲ್ಲಿ ಸರಿಯಾದ ಪದವನ್ನು ಹಾಕುವುದು)

112. ಮಾತನಾಡುವಾಗ ಸರಿಯಾದ ಪದಗಳನ್ನು ಸರಿಯಾದ ಕ್ರಮದಲ್ಲಿ, ಸರಿಯಾದ ಉಚ್ಚಾರ ಸಹಿತ ಮಾಡುವುದನ್ನು _______ ಎಂದು ಹೇಳುತ್ತಾರೆ.

(1) ದೈಹಿಕ ಭಾಷೆ (Body language)

(2) ಮಾತನಾಡುವ ರೀತಿ

(3) ಭಾಷಾ ಕ್ರಿಯೆ

(4) ಬಳಕೆಯಲ್ಲಿನ ಭಾಷೆ

113. ಕಲಿಸುವ ಸಾಧನವಾಗಿ ಕಥೆಯನ್ನು ಹೇಳುವುದನ್ನು ಇದಕ್ಕಾಗಿ ಉಪಯೋಗಿಸುತ್ತಾರೆ :

(1) ಮಕ್ಕಳನ್ನು ಕೇಳುವ ಕ್ರಿಯೆಯಲ್ಲಿ ತೊಡಗಿಸಲು.

(2) ಮಕ್ಕಳ ಮಾತಿನ ಕೌಶಲ್ಯವನ್ನು ಹೆಚ್ಚಿಸಲು.

(3) ಭಾಷಿಕ ಮತ್ತು ಸಾಹಿತ್ಯದ ಕೌಶಲ್ಯಗಳನ್ನು ಹೆಚ್ಚಿಸಲು.

(4) ತರಗತಿಯಲ್ಲಿ ಶಿಸ್ತನ್ನು ಉಳಿಸಿಕೊಳ್ಳಲು.

114. ಸಂದರ್ಭದಲ್ಲಿ ವ್ಯಾಕರಣವೆಂದರೆ ______

(1) ಶಿಸ್ತಿನ ಅಭ್ಯಾಸದಿಂದ ವ್ಯಾಕರಣ ಕಲಿಯುವುದು.

(2) ಪ್ರಥಮವಾಗಿ ಆಕೃತಿಯನ್ನು ಕಲಿತು ಕ್ರಿಯೆಯ ಕಡೆಗೆ ಚಲಿಸುವುದು.

(3) ಯಾವುದರಲ್ಲಿ ಆಕೃತಿಯನ್ನು ಗುರುತಿಸುತ್ತಾ ಸಾಂದರ್ಭಿಕವಾಗಿ ಕಲಿಯಬಲ್ಲೆವೊ ಅಂಥ ಸಹಜ ಭಾಷೆಯ ಉದಾಹರಣೆಗಳ ಮೂಲಕ ಕಲಿಯುವುದು.

(4) ಆಕೃತಿಯನ್ನು ಸಂರಚನಾತ್ಮಕ ರೀತಿಯಲ್ಲಿ ಕಲಿಯುವಲ್ಲಿ ಕಲಿಯುವವನು ಕ್ರಮಾನುಗತಿಕ ಬೆಳವಣಿಗೆಯನ್ನು ತಿಳಿಯುತ್ತಾನೋ ಅಂಥ ಕಲಿಕೆ.

115. ಈ ಕೆಳಗಿನವುಗಳಲ್ಲಿ ಯಾವುದು ಅಭ್ಯಾಸ ಕೌಶಲ್ಯ ಅಲ್ಲ ?

(1) ಉಪನ್ಯಾಸದ ಸಂದರ್ಭದಲ್ಲಿ ಟಿಪ್ಪಣಿ ಮಾಡಿಕೊಳ್ಳುವುದು.

(2) ಓದುವಾಗ ಟಿಪ್ಪಣಿ ಮಾಡಿಕೊಳ್ಳುವುದು.

(3) ಸಾರಲೇಖವನ್ನು (synopsis) ಬರೆಯುವುದು.

(4) ಒಂದು ಘಟನೆಗೆ ಉದ್ದೇಶಟಿಪ್ಪಣಿಯನ್ನು ಬರೆಯುವುದು.

www.prepp.in

Prepp
Your Personal Exams Guide



**116.** ಪಠ್ಯ ಪುಸ್ತಕ ಬರಹಗಾರರು ಯಾವಾಗಲೂ ಬರಹಗಾರರ ಪಠ್ಯಗಳನ್ನು, ಕವನಗಳನ್ನು ಮತ್ತು ಬರಹಗಳನ್ನು ಬಳಸಿಕೊಳ್ಳುತ್ತಾರೆ ಮತ್ತು ಸುದ್ದಿ ಪತ್ರಿಕೆಗಳಿಂದ, ಮ್ಯಾಗಝಿನ್‌ಗಳಿಂದ ಮೂಲ ಬರಹಗಳನ್ನು ಬಳಸಿಕೊಳ್ಳುತ್ತಾರೆ – ಏಕೆ ?

(1) ಅವುಗಳು ಅಥೆಂಟಿಕ್ ಮತ್ತು ಸಹಜ ಭಾಷೆಯಾಗಿವೆ.

(2) ಪಠ್ಯಪುಸ್ತಕ ಬರಹಗಾರರು ಅವುಗಳನ್ನು ಇಷ್ಟಪಡುತ್ತಾರೆ.

(3) ಪಠ್ಯಕ್ಕೆ ಅಭ್ಯಾಸಗಳನ್ನು (exercises) ರೂಪಿಸಲು ಅವು ಉಪಯೋಗವಾಗುತ್ತವೆ.

(4) ಅವುಗಳು ಓದಲು ಅನುಕೂಲಕರವಾಗಿವೆ.

**117.** ಈ ಕೆಳಗಿನದು ಯಾವ ಕಾರ್ಯ ?

ಅಧ್ಯಾಪಿಕೆಯು ಪಠ್ಯವನ್ನು ತನ್ನ ಸ್ಥಳದಲ್ಲೇ ಓದುತ್ತಾಳೆ ಮತ್ತು ಕಲಿಯುವವರು ಗುಂಪಿನಲ್ಲಿ ಮುಖ್ಯಾಂಶಗಳನ್ನು ಬರೆದುಕೊಳ್ಳುತ್ತಾರೆ ಮತ್ತು ಪಠ್ಯವನ್ನು ಪುನರ್ ರಚಿಸುತ್ತಾರೆ.

(1) ಶ್ರುತಲೇಖನ (Dictation)

(2) ವ್ಯಾಕರಣ ಶ್ರುತಲೇಖನ (Grammar Dictation)

(3) ಮರುಬರವಣಿಗೆಯ ಕೆಲಸ (Rewriting task)

(4) ಪಾರಸ್ಪರಿಕವಾದ ಶ್ರುತಲೇಖನ (Mutual dictation)

**118.** ಪ್ರಥಮ ಭಾಷೆಯ ಬೆಳವಣಿಗೆಯನ್ನು ಸಾಮಾನ್ಯವಾಗಿ ಹೀಗೆ ತಿಳಿಯಲಾಗುತ್ತದೆ

(1) ಕಲಿಯುವಿಕೆ

(2) ಅಂತಸ್ಥಗೊಳಿಸಿಕೊಳ್ಳುವಿಕೆ (Acquisition)

(3) ಬೆಳವಣಿಗೆ

(4) ಜ್ಞಾನ ಸಂಚಯ (Cognition)

**119.** ಮೊದಲ ತರಗತಿಯ ಭಿನ್ನ ಭಿನ್ನ ಮಾತೃಭಾಷೆ ಇರುವ ಮಕ್ಕಳು/ಕಲಿಯುವವರನ್ನು ಕ್ರಮವಾಗಿ ಎಲ್ಲ ಭಾಷೆಯಲ್ಲೂ ಶುಭಾಶಯಗಳನ್ನು ಒಬ್ಬರ ನಂತರ ಇನ್ನೊಬ್ಬರು ವಿನಿಮಯ ಮಾಡಿಕೊಳ್ಳಲು ಅಧ್ಯಾಪಿಕೆಯು ಹೇಳುತ್ತಾಳೆ. ಕಲಿಯುವ ಮಕ್ಕಳು ಪ್ರತಿದಿನವೂ ವಿಭಿನ್ನ ಭಾಷೆಯ ಕೆಲವು ಪದಗಳನ್ನು ಅರಿಯಲು ಪ್ರಯತ್ನಿಸುತ್ತಾರೆ. ಅಧ್ಯಾಪಿಕೆಯು ಯಾವ ಉಪಾಯವನ್ನು ಇಲ್ಲಿ ಬಳಸುತ್ತಿದ್ದಾಳೆ ?

(1) ಒಂದು ಸಂಪನ್ಮೂಲವಾಗಿ ಬಹುಭಾಷಿಕತೆಯನ್ನು ಬಳಸುವುದು.

(2) ಹೆಚ್ಚು ಭಾಷೆಗಳನ್ನು ಅರಿತಿರುವುದು. (polyglotism)

(3) ವಿವಿಧತೆಯನ್ನು ಒಂದು ಉಪಾಯವಾಗಿ ಬಳಸುವುದು.

(4) ಏಕ ಭಾಷಿಕತೆ

**120.** ಒಂದು ಭಾಷೆಯನ್ನು ಕಲಿಯುವವರಿಗೆ ಈ ರೀತಿಯಲ್ಲಿ ಪ್ರಾರಂಭಿಸುವುದು ಆದರ್ಶಮಯ ವಿಧಾನವಲ್ಲ

(1) ಶಿಶುಪ್ರಾಸಗಳು ಹಾಗೂ ಹಾಡುಗಳ ಮೂಲಕ.

(2) ಪದಗಳು ಹಾಗೂ ಚಿಕ್ಕ ಚಿಕ್ಕ ವಾಕ್ಯಗಳ ಬಳಕೆಯ ಮೂಲಕ.

(3) ವರ್ಣಮಾಲೆಯ ಅಕ್ಷರಗಳನ್ನು ಕಲಿಸುವ ಮೂಲಕ.

(4) ಮೌಖಿಕ ಮತ್ತು ಕೇಳುವುದನ್ನು ಬಳಸುವುದರ ಮೂಲಕ.

www.prepp.in



ಅಭ್ಯರ್ಥಿಗಳು ಕನ್ನಡವನ್ನು ಭಾಷೆ – **II** ಎಂದು ಆರಿಸಿ-ಕೊಂಡಿದ್ದರೆ ಮಾತ್ರ ಭಾಗ – **V** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **121 – 150)** ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

www.prepp.in



## PART – V
## ಭಾಷೆ – II
## ಕನ್ನಡ

**IMPORTANT : ಅಭ್ಯರ್ಥಿಗಳು ಕನ್ನಡವನ್ನು ಭಾಷೆ – II ಎಂದು ಆರಿಸಿಕೊಂಡಿದ್ದರೆ ಮಾತ್ರ, ಭಾಗ – V ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 121-150) ಉತ್ತರಿಸಬೇಕು.**

**ನಿರ್ದೇಶನ : ಈ ಕೆಳಗಿನ ಲೇಖನದ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 121-128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :**

ಕನ್ನಡ ಭಾಷೆ ಪ್ರಬಲವಾಗುವುದಕ್ಕೆ ಸಂಸ್ಕೃತವೇ ಆಧಾರವೆಂದು ಎಲ್ಲರೂ ಬಲ್ಲ ವಿಷಯವಾಗಿದೆ. ಆರ್ಯರು ದಕ್ಷಿಣಕ್ಕೆ ಬಂದು ದ್ರಾವಿಡರಲ್ಲಿ ಉತ್ತಮವಾದ ನಾಗರಿಕತೆಯನ್ನು ಹರಡಿದರು; ಆ ನಾಗರಿಕತೆಗೆ ತಕ್ಕ ಭಾವಗಳಿಗೆ ಶಬ್ದಗಳನ್ನು ಹೊಂದಿಕೊಟ್ಟು ಭಾಷೆಯನ್ನು ಪುಷ್ಟಿಮಾಡಿದರು; ಬರಹವನ್ನು ಕಲಿಸಿಕೊಟ್ಟರು; ಕಾವ್ಯಸ್ವರೂಪವನ್ನು ತೋರಿಸಿಕೊಟ್ಟರು; ಆ ಕಾವ್ಯಕ್ಕೆ ಬೇಕಾದ ವೃತ್ತಗಳನ್ನೂ ಅಲಂಕಾರ ವ್ಯಾಕರಣಗಳನ್ನೂ, ಪುರಾಣ ಇತಿಹಾಸಗಳನ್ನೂ ಒದಗಿಸಿಕೊಟ್ಟರು. ಈ ರೀತಿ ಉಳದ ಹೊಲದಲ್ಲಿ ಬೆಳೆ ಮಾಡಿ ನಾಡೆಲ್ಲಾ ಜೀವಕಳೆಯಿಂದ ತುಂಬಿ ತುಳುಕಾಡುವಂತೆ ಮಾಡಿಟ್ಟರು. ತಮ್ಮ ಸಂಸ್ಕೃತ ಭಾಷೆಯ ಮತ್ತು ಕಾವ್ಯದ ಬಲದಿಂದ ದ್ರಾವಿಡ ಜನರಿಗೆ, ಲಾಭವನ್ನು ಕಾಣಿಸಿದರೇ ಹೊರತು ನಷ್ಟವೇನೂ ತರಲಿಲ್ಲ. ಅವರ ಭಾಷೆ ಪುಷ್ಟಿಯಾಯಿತು, ಅವರ ಜ್ಞಾನ ವೃದ್ಧಿಯಾಯಿತು, ಅವರ ಮತ ಶ್ರೇಷ್ಠವಾಯಿತು. ಆದರೆ ಕನ್ನಡದಲ್ಲಿ ಕಾವ್ಯಗಳನ್ನು ಬರೆಯತೊಡಗಿದ ಜೈನರು ಮತ್ತು ಬ್ರಾಹ್ಮಣರು ಇದೇ ರೀತಿ ಕರ್ಣಾಟಕರ ಶ್ರೇಯಸ್ಸನ್ನು ಕೋರಲಿಲ್ಲ. ಇವರೂ ಮತವಿಷಯ ವಾದದ ತತ್ವಗಳನ್ನು ಜನರಿಗೆ ಬೋಧಿಸಿದ್ದು ನಿಜ; ಆದರೆ ಇವರ ಗ್ರಂಥಗಳೆಲ್ಲಾ ಮುಕ್ಕಾಲುಪಾಲು ವಸ್ತುವಿನಲ್ಲಾಗಲಿ, ಭಾವಗಳಲ್ಲಾಗಲಿ, ಶೈಲಿಯಲ್ಲಾಗಲಿ, ಜನಸಾಮಾನ್ಯಕ್ಕೆ ರುಚಿಸುವಂತೆ ಬರೆಯದೇ ಇರುವುದು ವ್ಯಸನಪಡತಕ್ಕದ್ದಾಗಿದೆ. ಇವರ ಗ್ರಂಥಗಳನ್ನು ಸಾಮಾನ್ಯ ಜನರು ಓದುತ್ತಿದ್ದರೋ – ಎಲ್ಲರೂ ಓದುವುದೆಲ್ಲಿ ಬಂತು ? ಓದಿಸಿ ಕೇಳುತ್ತಿದ್ದರೋ ಇಲ್ಲವೋ ಹೇಳುವುದು ಕಷ್ಟ. ಸಾಮಾನ್ಯ ಜನರೆಂದರೆ ದಕ್ಷಿಣದಲ್ಲಿ ಆರ್ಯರಲ್ಲ, ಶೂದ್ರರು; ಶೂದ್ರರನ್ನು ಕಂಡರೆ ಆರ್ಯರಿಗೆ ತಿರಸ್ಕಾರ ಈಗಲೂ ಇದೆ; ಹಿಂದೆ ಇನ್ನೂ ಹೆಚ್ಚೇ ಇದ್ದಿರಬೇಕು. ಈ ಶೂದ್ರರು ತಮ್ಮನ್ನು ಗೌರವದಿಂದ ಕಾಣುವುದಕ್ಕೆ ಎಷ್ಟು ಬೇಕೋ ಅಷ್ಟು ಅವರಿಗೆ ಉಪದೇಶವನ್ನು ಮಾಡಿದರು; ಮಿಕ್ಕದ್ದನ್ನೆಲ್ಲಾ ತಮ್ಮಲ್ಲೇ ಬಚ್ಚಿಟ್ಟು ಕೊಂಡರು. ಗ್ರಂಥಗಳನ್ನು ಅವರ ಏಳಿಗೆಗೆ ಬರೆಯಲಿಲ್ಲ. ರಾಜಸಭೆಗಳಲ್ಲಿ ಸುಖಪುರುಷನಾದ ಪೋಷಕನಿಗೆ ಹೊಗಳುಭಟ್ಟರಾಗಿ, ತಮ್ಮೊಳಗೆ ಒಬ್ಬರನ್ನೊಬ್ಬರು ಜರೆಯುತ್ತಾ, ಸಂಸ್ಕೃತ ಕವಿಗಳನ್ನು ತಲೆಮೆಟ್ಟಿ ಹಾರಿದೆವೆಂದು ಪ್ರತಿಷ್ಠೆ ಕೊಚ್ಚುತ್ತಾ, ಹತ್ತು ಎಳೆ ಸಂಸ್ಕೃತ ಒಂದು ಎಳೆ ಕನ್ನಡ, ಹೀಗೆ ಕೂಡಿಸಿ ಬರಿಯ ಶಬ್ದಾಡಂಬರದ ಮಗ್ಗವನ್ನು ಹೆಣೆಯುತ್ತಾ, ದೊಡ್ಡ ಬಿರುದುಗಳನ್ನೂ ಧನವನ್ನೂ ಅಗ್ರಹಾರಗಳನ್ನೂ ಪಡೆಯುವುದಕ್ಕಾಗಿ ಸಂಸ್ಕೃತ ಪಂಡಿತರಾದ ಕವಿಗಳು ಈ ಗ್ರಂಥಗಳನ್ನು ಬರೆದದ್ದು. ರಾಜರ ಪ್ರಾಬಲ್ಯ ಮುರಿದು ಹೋದ ಹಾಗೆಲ್ಲ ಈ ಕವಿಗಳ ಅಬ್ಬರವೂ ಅಡಗುತ್ತ ಬಂತು. ಶಿವಭಕ್ತರ ಕಾಲದಿಂದ ಸ್ವಲ್ಪಮಟ್ಟಿಗೆ ಅತಿ ಪಾಂಡಿತ್ಯಕ್ಕೆ ಹೋಗದೆ ಜನಮಂಡಲಿಗಾಗಿ ಬರೆದ ಕಾವ್ಯಗಳು ದೊರಕುತ್ತವೆ. ಆದರೆ ಪಾಂಡಿತ್ಯ ಅತಿವೃಷ್ಟಿಯಾಗಿ ಬ್ರಾಹ್ಮಣ ಜೈನರ ಕಾವ್ಯಗಳು ನರೆತುಕೊಂಡುವು; ಲಿಂಗಾಯಿತರ ಕಾವ್ಯಗಳು ಪಾಂಡಿತ್ಯ ಸಾಲದೆ ಬಂದು ಕಣ್ಣಿಗೆ ಒಣಬರಲಾಗಿ ನಿಂತುಕೊಂಡಿವೆ. ಈಚೀಚೆಗಂತೂ ಯಕ್ಷಗಾನ, ದೊಂಬಿದಾಸರ ಪದ, ಶುಕಸಪ್ತತಿ, ಹಲ್ಲಿಯ ಶಕುನ, ಇವೇ ಜನಗಳಿಗೆ ಮಹಾಕಾವ್ಯಗಳು ! ಏನು ಇಕ್ಕಟ್ಟಿನಲ್ಲಿ ಸಿಕ್ಕಿದೆವು ! ಹಿಂದಿನ ಸಂಸ್ಕೃತದ ಪ್ರಾಬಲ್ಯವೂ ಅದರ ಕಾವ್ಯಮಾರ್ಗವೂ ಕುಗ್ಗಿ ಹೋದುವು; ಮುಂದೆ

www.prepp.in



ಇಂಗ್ಲಿಷಿನ ಪ್ರಾಬಲ್ಯವೂ ಅದರ ಕಾವ್ಯ ಮಾರ್ಗವೂ ಹೆಚ್ಚುವಂತೆ ತೋರುತ್ತದೆ. ಆದರೆ ಇದು ಇನ್ನೂ ದೃಢವಾಗಿ ಎಲ್ಲರ ಮನಸ್ಸಿಗೂ ಹತ್ತಿಲ್ಲ. ನಮಗೇನೋ ಇದು ಸ್ವತಸ್ಸಿದ್ಧವಾಗಿ ಕಾಣುತ್ತದೆ; ಇಂಗ್ಲಿಷ್ ಸಾಹಿತ್ಯವೇ ಜೀರ್ಣವಾದ ನಮ್ಮ ಕಾವ್ಯಮಾಲೆಯನ್ನು ಕೈಕೊಟ್ಟು ಎತ್ತಬೇಕು; ಇಂಗ್ಲಿಷ್ ಸಾಹಿತ್ಯವೇ ಸಂಸ್ಕೃತ ಸಾಹಿತ್ಯದಿಂದ ನಮ್ಮ ಕಾವ್ಯಮಾಲೆಗೆ ಇಳಿದಿರುವ ದೋಷಗಳನ್ನು ಪರಿಹಾರ ಮಾಡಬೇಕು.

ಭಾಷೆಯ ವಿಚಾರದಲ್ಲಿ ಹೊಸಗನ್ನಡವನ್ನೇ ಬರೆಯಬೇಕು. ಹಳಗನ್ನಡದಲ್ಲಿ ನನಗೂ ಅಕ್ಕರೆ ಉಂಟು; ತಿಳಿಯಾದ ಬಿಗಿಯಾದ ತಿರುಳಾದ ಇಂಪಾದ ಆ ನುಡಿಯನ್ನು ಕೈಬಿಡುವುದೆಂದರೆ ನನಗೂ ವ್ಯಸನವೆ. ಮುಂದೆ ಜನರಲ್ಲಿ ಅದರ ತಿಳಿವಳಿಕೆ ಹೆಚ್ಚಿದ ಮೇಲೂ, ಇಲ್ಲ, ಕೇವಲ ವಿದ್ಯಾವಂತರೇ ತಿಳಿಯಬೇಕಾದ ತತ್ವಗಳಿಗಾಗಿಯೋ, ಇಲ್ಲ, ಪರಮೋತ್ಕೃಷ್ಟವಾದ ಕಾವ್ಯ – ನಾಟಕ – ಗೀತೆಗಳಿಗಾಗಿಯೊ ಅದನ್ನು ಉಪಯೋಗಿಸಿದರೂ ಉಪಯೋಗಿಸಬಹುದು. ಆದರೆ ಸದ್ಯಕ್ಕೆ ಜನರಿಗೆ ತಿಳಿಯದ ಭಾಷೆಯಲ್ಲಿ ಬರೆಯುವುದರಲ್ಲಿ ಯಾವ ಬುದ್ಧಿವಂತಿಕೆಯೂ ಇಲ್ಲ. ಹೊಸಗನ್ನಡವನ್ನೇ ಎಲ್ಲರೂ ಹಿಡಿಯಬೇಕು. ಅದಕ್ಕೆ ಹಳಗನ್ನಡದ ಬೆರಕೆಯಾಗಲಿ, ಜನರ ಬಾಯಲ್ಲಿ ಬಳಕೆಗೆ ಬಂದಿರುವಷ್ಟು ಮಟ್ಟಿಗಲ್ಲದೆ ಹೆಚ್ಚಿನ ಪುಸ್ತಕದ ಸಂಸ್ಕೃತವಾಗಲಿ ತದ್ಭವವಾಗಲಿ ಸೇರಕೂಡದು. ಗ್ರಾಮ್ಯವನ್ನು ಬಿಟ್ಟು ವಿದ್ಯಾವಂತರೂ ಉತ್ತಮ ಜಾತಿಯವರೂ ಆಡತಕ್ಕ ಸ್ಫುಟವಾದ ಕನ್ನಡವನ್ನು ಗ್ರಂಥ ಭಾಷೆಯಾಗಿ ತಿರುಗಿಸಿಬಿಟ್ಟರೆ, ಅಚ್ಚು ಹಾಕುವುದರಿಂದಲೂ ಮಕ್ಕಳಿಂದ ಕಲಿಸುವುದರಿಂದಲೂ ಇದೇ ನೆಲೆಯಾಗಿ ನಿಂತು ಎತ್ತಲೂ ಹರಡುತ್ತದೆ. ಮುಂದಿನ ಗ್ರಂಥಗಳಿಗೆಲ್ಲಾ ಒಂದೇ ಸಮನಾದ ಭಾಷೆ ಸಿಕ್ಕುತ್ತದೆ. ಅನ್ಯಶಬ್ದಗಳನ್ನು ವಿಶೇಷವಾಗಿ ಸೇರಿಸಬಾರದಾದರೂ, ಜನಗಳು ರೂಢಿಗೆ ತಂದ ಮಾತುಗಳನ್ನು ಕಲ್ಪನೆ ಮಾಡಬಾರದು; ಹಾಗೆ ಮಾಡಿದರೂ ಕನ್ನಡ ಮಾತುಗಳನ್ನೇ, ಬಳಸುತ್ತಿರುವ ಸಂಸ್ಕೃತ ಪದಗಳನ್ನೇ ಕೂಡಿಸುವುದು ಅನುಕೂಲ. ರೈಲನ್ನು ರೈಲೆಂದೇ ಕರೆಯುವುದು ಉತ್ತಮ; ಹೊಗೆಬಂಡಿ, ಹೊಗೆಗಾಡಿ ಎನ್ನುವುದು ಮಧ್ಯಮ, ಧೂಮ ಶಕಟವೆನ್ನುವುದು ಅಧಮ. ಮುಖ್ಯ, ಬರೆಯುವವರು ಕಠಿಣ ಪದಗಳಲ್ಲಿ ಕೈವಲ್ಯವುಂಟೆಂದು ಮೋಸ ಹೋಗದೆ, ಅರ್ಥದಲ್ಲಿ ಬುದ್ಧಿಯನ್ನು ಓಡಿಸಿ ಪ್ರೌಢತನವನ್ನು ತೋರಿಸಿದರೆ ಎಲ್ಲರೂ ಬದುಕಿಕೊಂಡಾರು.

**121.** ಬಹುಪಾಲು ಜೈನ ಗ್ರಂಥಗಳು ಯಶಸ್ಸು ಪಡೆಯದೇ ಹೋದದಕ್ಕೆ ಕಾರಣ :

(1) ರಾಜರನ್ನು ಓಲೈಸಿದ ಕವಿ ಪರಂಪರೆ.

(2) ಸಂಸ್ಕೃತ ಭೂಯಿಷ್ಠತೆ.

(3) ಜನಸಾಮಾನ್ಯರಿಗೆ ತಲುಪದೇ ಹೋದದ್ದು.

(4) ಮತ ತತ್ತ್ವಗಳನ್ನು ಬೋಧಿಸಿದ್ದು.

**122.** "ಇಂಗ್ಲಿಷ್ ಸಾಹಿತ್ಯವೇ ಸಂಸ್ಕೃತ ಸಾಹಿತ್ಯದಿಂದ ನಮ್ಮ ಕಾವ್ಯಮಾಲೆಗೆ ಇಳಿದಿರುವ ದೋಷಗಳನ್ನು ಪರಿಹಾರ ಮಾಡಬೇಕು" ಎನ್ನಲು ಕಾರಣ :

(1) ಸಂಸ್ಕೃತ ಭಾಷಾ ಬಳಕೆ

(2) ಕನ್ನಡ ಭಾಷೆ ಮತ್ತು ಸಾಹಿತ್ಯದ ಜಡತೆಗೆ ಇಂಗ್ಲಿಷ್ ಕಾರಣವಲ್ಲ

(3) ಕೇವಲ ಪುರಾಣಾಧಾರಿತ ರಚನೆಗಳು

(4) ಅಷ್ಟಾದಶ ವರ್ಣನೆಗಳಿಂದ ಕೂಡಿದ ಕಥನಗಳು

**123.** ಕನ್ನಡ ಭಾಷೆ ಸುಧಾರಣೆಯಾಗಬೇಕೆಂದರೆ ಈ ತತ್ತ್ವವನ್ನು ಅನುಸರಿಸಬೇಕು :

(1) ಕಠಿಣ ಪದಗಳನ್ನು ಅಳವಡಿಸಬೇಕು

(2) ಹಳಗನ್ನಡ ಶಬ್ದಗಳು ಸೇರಬೇಕು

(3) ಹೊಸಗನ್ನಡದಲ್ಲಿ ಬರೆಯಬೇಕು

(4) ಜನರಿಗೆ ತಿಳಿಯದ ಭಾಷೆಯಲ್ಲಿ ಬರೆಯಬೇಕು

www.prepp.in



124. ಜನರ ರೂಢಿಯ ಮಾತುಗಳಲ್ಲಿ ಸೇರ್ಪಡೆಯಾಗಿರುವ ಅನ್ಯಭಾಷೆಯ ಪದಗಳನ್ನು ಹೇಗೆ ಬಳಸಬೇಕು :
(1) ಮೂಲರೂಪದಲ್ಲಿ
(2) ಭಾಷಾಂತರಿಸಿ
(3) ತದ್ಭವ ರೂಪದಲ್ಲಿ
(4) ದೇಶಿ ಶಬ್ದಗಳೊಡನೆ ಕೂಡಿಸಿ

125. 'ಹತ್ತು ಎಳೆ ಸಂಸ್ಕೃತ ಒಂದು ಎಳೆ ಕನ್ನಡ' ಎಂದರೆ :
(1) ಸರಳವಾಗಿ ಬರೆದದ್ದು
(2) ಲಕ್ಷಣಗಳ ಜೊತೆಯಿರುವುದು
(3) ವ್ಯಾಕರಣಬದ್ಧವಾದದ್ದು
(4) ಹೆಚ್ಚು ಸಂಸ್ಕೃತದ ಹೆಣಿಗೆಯುಳ್ಳ ಬರಹ

126. 'ಧೂಮಶಕಟ' ಎನ್ನುವುದು ಯಾವ ಭಾಷೆಯ ಪದ :
(1) ಪ್ರಾಕೃತ
(2) ಸಂಸ್ಕೃತ
(3) ಕನ್ನಡ
(4) ಪಾಲಿ

127. ಶಿವಭಕ್ತರ ಕಾಲದಲ್ಲಿ ಯಾರಿಂದ ಹೆಚ್ಚು ಕಾವ್ಯಗಳು ರಚನೆಯಾದವು ?
(1) ಲಿಂಗಾಯತರಿಂದ
(2) ಬೌದ್ಧರಿಂದ
(3) ಜೈನರಿಂದ
(4) ಬ್ರಾಹ್ಮಣರಿಂದ

128. ಈ ಲೇಖನದಲ್ಲಿ ಯಾವ ಮುಖ್ಯ ಸಂಗತಿಯನ್ನು ಕುರಿತು ಚರ್ಚಿಸಲಾಗಿದೆ :
(1) ಕರ್ನಾಟಕದ ಸಾಂಸ್ಕೃತಿಕ ಸ್ಥಿತ್ಯಂತರಗಳು.
(2) ಕನ್ನಡ ಭಾಷೆ ಮತ್ತು ಸಾಹಿತ್ಯದ ಬಿಕ್ಕಟ್ಟುಗಳು.
(3) ಸಾಮಾಜಿಕ ಪಲ್ಲಟಗಳು.
(4) ರಾಜಕೀಯ ವಿದ್ಯಮಾನಗಳು.

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ: 129 - 135) ಸೂಕ್ತ ಉತ್ತರಗಳನ್ನು ಆರಿಸುವುದರ ಮೂಲಕ ಉತ್ತರಿಸಿ :**

ರಾತ್ರೆ ಊಟವನ್ನು ಮುಗಿಸಿದವನು "ಅಜ್ಜಮ್ಮ, ಅಶ್ವತ್ಥದ ಕಟ್ಟೆಗೆ ಹೋಗೋಣವೇ ?" ಎಂದು ಕೇಳಿದೆ. 'ಆಯಿತು ಹೋಗುವ' ಎಂದರು ಅವರು. ಅವಸರಿಸಿ ಹಟ್ಟಿಗೆ ಹೋಗಿ, ಎರಡು ತಾಮ್ರದ ತುಣುಕುಗಳನ್ನು ಹಿಡಿದುಕೊಂಡು ಅವರ ಜತೆಗೆ ಹೋಗಿ ಕುಳಿತೆ. ಅಷ್ಟಮಿಯ ಬೆಳದಿಂಗಳು ಆ ಸುತ್ತಲೂ ಹಾಸಿ, ಅಲ್ಲಿನ ಶಾಂತಿಗೆ ಸೊಬಗನ್ನು ತಂದೊಡ್ಡಿತ್ತು. ಅಜ್ಜಿ ತಾವಾಗಿಯೇ ಮಾತನ್ನು ತೊಡಗಿದರು. 'ಏನೋ ಹುಡುಕುತ್ತ ಇದ್ದೀ – ಈ ಎರಡು ಮೂರು ದಿನಗಳಿಂದಲೂ ಏನು ಗಂಟು ಹುಡುಕಿದೆ ?' ಎಂದು ಕೇಳಿದರು.

"ಮನೆಯಲ್ಲಿ ಕಾಣದ್ದಕ್ಕೆ ಹೇಳುತ್ತೀರಾ ?"

"ಅಲ್ಲದಿದ್ದರೂ ಗೊತ್ತಾಗುತ್ತದೆ ನನಗೆ ; ಹುಡುಕಿ, ಹುಡುಕಿ, ಏನನ್ನೋ ಸಂಪಾದಿಸಿದ್ದೀಯ ; ತಾಮ್ರ, ಚಿನ್ನ, ಮಣ್ಣು ಮಸಣ. ಏನು ಚಪಲವೋ ನಿನ್ನದು ಎಂದರು."

ಇವತ್ತೇಕೆ ಅವರು ಇಷ್ಟು ಅಪ್ರಸನ್ನರಾಗಿದ್ದಾರೆ, ನನ್ನ ಅಧಿಕ ಪ್ರಸಂಗಕ್ಕೆ ಬಯ್ಯುತ್ತಿದ್ದಾರೆ. ಬಯ್ಯಲಿ, ಹಿರಿಯರಲ್ಲವೇ – ಎಂದು ಯೋಚಿಸಿ, ಮುಂದಿನ ಬೈಗಳನ್ನು ನಿರೀಕ್ಷಿಸಿದೆ. ಅವರು "ಆ ಕೈಯಲ್ಲಿದ್ದದ್ದನ್ನು ಕೊಡು ; ತಾಮ್ರದ ತುಂಡು ತಂದಿದ್ದೀಯ ಅಷ್ಟೇ ಅಲ್ಲವೇ ? ಚಿನ್ನ ಅಡಗಿಸಿಟ್ಟಿದ್ದೀ" ಎಂದರು.

"ಅಡಗಿಸಿಡಲಿಲ್ಲ ಅಜ್ಜಿ; ನೀವು ಬಯ್ಯದಿದ್ದರೆ ಹೇಳುತ್ತೇನೆ – ಆ ಕಲ್ಲು ಮರಿಗೆಯಲ್ಲಿದ್ದ ಹಾಡಿಯಲ್ಲಿ, ನೀವು ಆ ದಿವಸ ನಿಂತಿರಲ್ಲ, ಆ ಅರೆಯ ಹತ್ತಿರ ಒಂದು ಹಾಳು ಬಾವಿಯಿದ್ದಿತ್ತು. ನಾನು ಅದನ್ನು ಅಗೆಯಿಸಿದೆ. ಏನೇನೋ ಸಿಕ್ಕಿತು; ಚಿನ್ನವೂ ಸಿಕ್ಕಿತು. ತಾಮ್ರವೂ ಸಿಕ್ಕಿತು; ಮನುಷ್ಯರ ತಲೆಯ ಓಡು

www.prepp.in



ಸಿಗಬೇಕೇ ಅದರಲ್ಲಿ ! ಅದನ್ನು ತಂದಿದ್ದೇನೆ – ಅದರಿಂದಲೇ ಹೆದರಿಕೆಯಾಯಿತು ನಿಮ್ಮನ್ನು ಮಾತನಾಡಿಸುವುದಕ್ಕೆ. ಯಾವ ರಾಯನ ಕಾಲದಲ್ಲಿ ಅಲ್ಲಿ ಯಾರೇನು ಮಾಡಿದ್ದರೋ ! ಹೆಂಗಸೊಬ್ಬಳ ಹೆಣ ಹಾಗೆ ಬಾವಿಯಲ್ಲೇ ಉಳಿಯಬೇಕಾದರೆ; ಸರ ಅವಳದ್ದೇಯೋ ಏನೋ" ಎಂದೆ.

"ತೆಗೆದುಕೊಂಡು ಬಾ. ತಲೆಯೋಡಾದರೆ ಏನಂತೆ ? ನಾಳೆ ನಾವು ಸತ್ತ ಮೇಲೆ, ನಮ್ಮನ್ನು ಸುಡದಿದ್ದರೆ, ನಮ್ಮ ಓಡೂ ಒಂದು ಕಡೆ ಹಾಗೆಯೇ ಬಿದ್ದು ಕೊಂಡಿರುತ್ತದೆ. ಯಾರ ಕಾಲಿಂದಾದರೂ ನಾವು ತುಳಿಸಿಕೊಳ್ಳುತ್ತೇವೆ; ತುಳಿಸಿಕೊಂಡರೇನಂತೆ ? ಆಗ ನಾವು ನಾವಾಗಿರುವುದಿಲ್ಲವಲ್ಲ; ಓಡು ನಮ್ಮದಾಗಿರುವುದು ನಮ್ಮ ದೇಹದಲ್ಲಿ ಉಸಿರಾಡುವಷ್ಟು ಕಾಲ; ಉಸಿರು ಹೊರಟು ಹೋದ ಮೇಲೆ, ಮೊದಲೂ ಸಹ, ಅದು ಉಂಟು ಮಾಡಿದವನ ಸೊತ್ತಲ್ಲವೇ ?" ಎಂದರು.

ಅವರ ಮಾತನ್ನು ಕೇಳಿ, ತುಂಬ ಧೈರ್ಯವಾಗಿ, ನಾನು ಹಟ್ಟಿಯ ಕಡೆಗೆ ಧಾವಿಸಿದೆ. ಅಲ್ಲಿಂದ ನಾನು ಆ ದಿನ ಒಟ್ಟುಗೂಡಿಸಿ ತಂದ ಚೀಲವನ್ನೇ ಅವರ ಮುಂದಕ್ಕಿಟ್ಟೆ. ಚೀಲದಲ್ಲಿ ಕೈ ತುರುಕಿದರು. ಎಲ್ಲವನ್ನೂ ಮುಟ್ಟಿ ನೋಡಿರಬೇಕು. ನಾನು ಮೊದಲು ಕೊಟ್ಟ ತಾಮ್ರದ ತುಣುಕುಗಳನ್ನು ಅದರ ಮೇಲಿಟ್ಟು ಆ ಚೀಲವನ್ನು ತಮ್ಮ ತೊಡೆಯ ಸಮೀಪಕ್ಕಿರಿಸಿಕೊಂಡು, ಬಹಳ ಹೊತ್ತು ಮೌನವಾಗಿ ಕುಳಿತರು. 'ಇದಾದರೆ ಒಂದು ವಿಚಿತ್ರ' ಎಂಬ ಮಾತು ಅವರ ಬಾಯಿಯಿಂದ ಹೊರಟಿತು. ನಾನು ಮೂಕ ಮೌನದಿಂದ ಅವರನ್ನು ಕೇಳತೊಡಗಿದೆ.

ನನಗೆ ನೋಡು – ರುದ್ರ, ಇಂದ್ರ, ಮರುತ್ತು, ವರುಣ ಅಂದರೆ ಗೊತ್ತಾಗುತ್ತದಪ್ಪ. ಮಿತ್ರ ಎಂಬವ ಯಾರೆಂದು ಅಂದಾಜಾಗುವುದಿಲ್ಲ. ಮತ್ತೆ ನೋಡು – ಈ ವಠಾರಕ್ಕೆ ಬೇರೆಯೇ ಒಂದು ಜನತೆ ಬಂದ ಹಾಗೆ ಕಾಣಿಸುತ್ತದೆ. ಅವರು ಇವೊಂದನ್ನೂ ನಂಬದಿದ್ದವರು. ಯಜ್ಞ, ಯಾಗ ಸುಳ್ಳು, ವ್ಯರ್ಥ ಅಂದರು. ಅವರು ಮೊದಲು ಬಂದ ಜನರಿಗೆ ತುಂಬ ತುಂಬ ಉಪದ್ರ ಕೊಟ್ಟರು. ಹವ್ಯ ಕವ್ಯ ಎರೆಯುವ ಸಟ್ಟುಗಗಳನ್ನು ಕಿತ್ತು ಬಾವಿಗೆ ಎಸೆದು ಕಂಗಾಲುಗೊಳಿಸಿದರು. ಕಾಲಗತಿ ಬದಲಿಸಿತು. ಜನಕ್ಕೆ ಇಂದ್ರ, ವರುಣರು ಬೇಡವಾದರು. ಆಗಿರಬೇಕು ಹಾಗೆಯೇ – ಎಂದು ನನ್ನ ಅಂದಾಜು. ಇನ್ನಾರೋ ಒಬ್ಬನ ಹೆಸರನ್ನು ಹೇಳಿಕೊಂಡು ತಿರುಗಾಡುವ ಹೊಸ ಜನರು ಈ ಭಾಗದಲ್ಲೆಲ್ಲ ಸುತ್ತಾಡಿದ ಹಾಗೆ ಕಾಣಿಸುತ್ತದೆ. ಕಾವಿ ಶಾಟಿಯ ಹಾಗಿದ್ದ ಅರಿವೆಯನ್ನು ತೊಟ್ಟು, ತಲೆ ಬೋಳಿಸಿಕೊಂಡು, ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ತಿರುಗಾಡಿದರು. ಅದು ನಿಜವಾದ ಕಾವಿಶಾಟಿಯ ಬಣ್ಣವಲ್ಲ, ಅರಿಸಿನ ಬಣ್ಣ – ಕಾಣಿಸುತ್ತದೆ ಕಣ್ಣಿಗೆ. ಅವರೂ ಏನೇನೋ ಮಂತ್ರ ಹೇಳುತ್ತಾರೆ; ಅದರ ಭಾಷೆಯೇ ತಿಳಿಯುವುದಿಲ್ಲ.

ಹೋ ಬೌದ್ಧಾವತಾರ – ಎಂಬುದು ಅದನ್ನೋ; ಬತ್ತಲೆ ಬೌದ್ಧನಿಗೇ … ಎಂದು ಮಂಗಳ ಪದ ಹೇಳುತ್ತಾರಲ್ಲ. ಆದರೆ ಅವನು ಬತ್ತಲೆ ದೇವರಲ್ಲ; ಅವನ ಮೈಮೇಲೆ ವಸ್ತ್ರವಿದೆ; ಆ ಮೇಲಿನ ಕತೆ ಕಷ್ಟದ್ದು. ಆಮೇಲೆ ನಡೆದದ್ದು ಏನು ಅನ್ನುತ್ತೀಯ ? ಏನೇನೂ ಸ್ವಾರಸ್ಯವಿಲ್ಲದ ಕತೆ. ಕಲ್ಲು ಮಂಟಪದ್ದೇ ಕತೆ ಅದು. ಜನ ಮರುಳೋ, ಜಾತ್ರೆ ಮರುಳೋ ಅಂತ ಮಾತಿಗೆನ್ನುತ್ತಾರೆ. ಎರಡೂ ಮರುಳೇ.

**129.** ಅಜ್ಜಿ – ಮೊಮ್ಮಗನ ಮಧ್ಯೆ ನಡೆಯುವ ಚರ್ಚೆಯ ವಿಷಯ ಯಾವುದು ?

(1) ವರ್ತಮಾನದ ಚರಿತ್ರೆಯನ್ನು ಕುರಿತದ್ದು

(2) ಮಾನವನ ವಿಕಾಸವನ್ನು ಕುರಿತದ್ದು

(3) ಸೃಷ್ಟಿಯ ಉಗಮವನ್ನು ಕುರಿತದ್ದು

(4) ಗತಕಾಲದ ಪಳೆಯುಳಿಕೆಗಳನ್ನು ಕುರಿತದ್ದು

**130.** ಯಜ್ಞ ಯಾಗಗಳನ್ನು ವ್ಯರ್ಥವೆಂದು ಭಾವಿಸಿದ ಧರ್ಮೀಯರು :

(1) ಸಿಕ್ಕರು

(2) ಬೌದ್ಧರು

(3) ಜೈನರು

(4) ಕಾಪಾಲಿಕರು

www.prepp.in



**131.** 'ಜನಮರುಳೋ, ಜಾತ್ರೆ ಮರುಳೋ' ಎಂಬುದು :

(1) ಗಾದೆ
(2) ನುಡಿಗಟ್ಟು
(3) ಪಡೆನುಡಿ
(4) ಒಗಟು

**132.** ನಿಜ ಇತಿಹಾಸದ ಎಳೆಗಳನ್ನು ಬಿಚ್ಚಿಡುವ ಅಜ್ಜಿಯ ಜ್ಞಾನ ಯಾವ ಮೂಲದ್ದು :

(1) ಗ್ರಂಥಸ್ಥ ಮೂಲದ್ದು
(2) ಮೌಖಿಕ ಪರಂಪರೆಯದ್ದು
(3) ಶಾಸನ ಮೂಲದ್ದು
(4) ಊಹಾತ್ಮಕವಾದದ್ದು

**133.** 'ತಲೆಯೋಡು' ಎಂಬುದು ಯಾವ ಸಂಧಿ :

(1) ಆದೇಶಸಂಧಿ
(2) ಆಗಮಸಂಧಿ
(3) ಪ್ರಕೃತಿಭಾವ
(4) ಲೋಪಸಂಧಿ

**134.** 'ಸಟ್ಟುಗ' ಎಂಬ ಶಬ್ದ :

(1) ಮರಾಠಿ
(2) ಹಿಂದಿ
(3) ದೇಸಿ ಶಬ್ದ
(4) ಸಂಸ್ಕೃತ

**135.** ಅಜ್ಜಿಯನ್ನು ಅಶ್ವತ್ಥಕಟ್ಟೆಗೆ ಆಹ್ವಾನಿಸುವ ಉದ್ದೇಶವೇನು ?

(1) ಹರಟೆ ಹೊಡೆಯುವುದು
(2) ವಿಶ್ರಾಂತಿ ಪಡೆಯುವುದು
(3) ಗಹನ ವಿಚಾರಗಳನ್ನು ಚರ್ಚಿಸುವುದು
(4) ಧ್ಯಾನಮಗ್ನರಾಗುವುದು

**136.** ಆರ್ಟಿಕಲ್ 343 (2) ರ ಪ್ರಕಾರ ಸಂವಿಧಾನವು ಈ ಬಳಕೆಯನ್ನು ಅವಕಾಶ ಮಾಡಿಕೊಡುತ್ತದೆ :

(1) ಆಡಳಿತ ಭಾಷೆಯಾಗಿ ಹಿಂದಿ
(2) ಸಹಾಯಕ ಆಡಳಿತ ಭಾಷೆಯಾಗಿ ಹಿಂದಿ
(3) ಆಡಳಿತ ಭಾಷೆಯಾಗಿ ಇಂಗ್ಲಿಷ್
(4) ಸಹಾಯಕ ಆಡಳಿತ ಭಾಷೆಯಾಗಿ ಇಂಗ್ಲಿಷ್

**137.** ಶಾಸ್ತ್ರೀಯ ಭಾಷೆ ಎನ್ನಿಸಿಕೊಳ್ಳಲು ಈ ಕೆಳಗಿನವುಗಳಲ್ಲಿ ಯಾವುದು ಮಾನದಂಡ ಅಲ್ಲ ?

(1) ಆ ಭಾಷೆಗೆ 1500 ರಿಂದ 2000 ವರ್ಷಗಳಷ್ಟು ಹಳೆಯ ಚರಿತ್ರೆ ಮತ್ತು ಬರವಣಿಗೆಯ ಸಾಹಿತ್ಯ ಇರಬೇಕು.
(2) ಪ್ರಾಚೀನ ಸಾಹಿತ್ಯ ರಚನೆ/ಮಹಾಕಾವ್ಯ ರಚನೆಯು ಆ ಭಾಷೆಯಲ್ಲಿ ಬರೆದಿರಬೇಕು.
(3) ಆ ಭಾಷೆಯು ಅಧಿಕೃತ ಭಾಷೆ-ಯಾಗಿರಬಾರದು.
(4) ಆ ಭಾಷೆಗೆ ತನ್ನದೇ ಆದ ಅಪ್ಪಟ ಸಾಹಿತ್ಯಿಕ ಪರಂಪರೆ ಇರಬೇಕು ಮತ್ತು ಬೇರೆ ಭಾಷಿಕ ಸಮುದಾಯಗಳಿಂದ ಅದು ಕಡ ಪಡೆದಿರಬಾರದು.

**138.** ಕಲಿಯುವವರ ಕೇಳುವ ಕೌಶಲ್ಯಗಳನ್ನು ಈ ಮೂಲಕ ಮಾಪನ ಮಾಡಬಹುದು.

(1) ಅವರೊಡನೆ ನಿರಂತರ ಚಟುವಟಿಕೆ ಹಾಗೂ ಅಭ್ಯಾಸದ ಮೂಲಕ.
(2) ಒಂದು ಕಥೆಯನ್ನು ಹೇಳಿ, ಅವರ ಅರಿಯುವಿಕೆಯನ್ನು ಆಧರಿಸಿ ಪ್ರಶ್ನೆಗಳನ್ನು ಕೇಳುವುದು.
(3) ನಿಶ್ಯಬ್ದ ಓದಿಗಾಗಿ ಹೆಚ್ಚು ಅವಕಾಶಗಳನ್ನು ಒದಗಿಸುವುದು.
(4) ಅವರನ್ನು ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ಯುವುದು.

www.prepp.in

Prepp
Your Personal Exams Guide



139. ಓದುವ ಪ್ರಾಥಮಿಕ ಘಟ್ಟದಲ್ಲಿ ಶಿಕ್ಷಕನು ಈ ಕಡೆಗೆ ಗಮನಹರಿಸಬೇಕು.

(1) ಭಾಷೆಯ ವರ್ಣಮಾಲೆಯನ್ನು ನೆನಪಿನಲ್ಲಿಡುವಂತೆ ಮಾಡುವುದು.

(2) ನಿರರ್ಗಳವಾದ ಓದು ಉಂಟಾಗುವಂತೆ ಮಾಡುವುದು.

(3) ಅಕ್ಷರ-ಧ್ವನಿ ನಡುವೆ ಹೊಂದಾಣಿಕೆ-ಯನ್ನು ಬೆಳೆಸುವುದು.

(4) ಓದುವುದರ ನಿಖರತೆಯ ಕಡೆಗೆ ಗಮನ.

140. ಕೇಳುವುದು ಮತ್ತು ಓದುವುದು – ಇವುಗಳು :

(1) ಗ್ರಹಿಸುವ ಸಾಮರ್ಥ್ಯಗಳು (Receptive skills)

(2) ಅಭಿವ್ಯಕ್ತಿಯ ಕೌಶಲ್ಯಗಳು (Expressive skills)

(3) ಕುತೂಹಲ ಮೂಡಿಸುವ ಕೌಶಲ್ಯಗಳು

(4) ಯೋಚಿಸುವ ಕೌಶಲ್ಯಗಳು

141. ತರುಣ ಬರಹಗಾರರ ವೈಯಕ್ತಿಕ ಅವಶ್ಯಕತೆ-ಯನ್ನು ಪೂರೈಸಲು ಶಿಕ್ಷಕರು ಹೀಗೆ ಮಾಡಬೇಕು :

(1) ಅವರು ಮಾಡುವ ವ್ಯಾಕರಣದ ತಪ್ಪುಗಳನ್ನು ವಿವರವಾಗಿ ಒದಗಿಸಬೇಕು.

(2) ಅವರು ಮಾಡಿದುದನ್ನು ಹೊಗಳುತ್ತಾ, ಅವರು ಮಾಡಿದ ಕೆಲಸವನ್ನು ಉದಾಹರಿಸುತ್ತ ವಿಶೇಷವಾದ ವ್ಯಾಖ್ಯಾನ ಮಾಡಬೇಕು.

(3) ತಪ್ಪುಗಳನ್ನು ಗಮನಿಸದೇ ಇರುವಂತೆ ಹೇಳುವುದು.

(4) ತರಗತಿಯಲ್ಲಿ ಚೆನ್ನಾಗಿ ಬರೆಯದೇ ಇದ್ದುದಕ್ಕೆ ಅವರಿಗೆ ಗ್ರೇಡಿಂಗ್‌ನ್ನು ಕೊಡುವುದು.

142. ಈ ಕೆಳಗಿನವುಗಳಲ್ಲಿ ಯಾವುದು ಭಾಷಾ ಗ್ರಹಿಕೆ ಮತ್ತು ಭಾಷಾ ಕಲಿಕೆಯ ನಡುವಣ ಮೂಲಭೂತ ವ್ಯತ್ಯಾಸವಾಗಿದೆ ?

(1) ಸ್ಫುಟತೆ ಮತ್ತು ನಿಖರತೆ

(2) ಭಾಷೆಗೆ ತೆರೆದುಕೊಳ್ಳುವುದು

(3) ನಿಖರತೆ ಮತ್ತು ವೇಗ

(4) ವೇಗ ಮತ್ತು ಉಚ್ಚಾರಣೆ

143. ಮಾತೃಭಾಷೆಯು ಒಂದು ಸಂಪನ್ಮೂಲವಾಗಿ ಬಳಕೆಯಾಗುವುದನ್ನು ಕುರಿತಂತೆ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾದುದಲ್ಲ ?

(1) ಅದು ಮಕ್ಕಳನ್ನು ಕಲಿಯಲು, ಯೋಚಿಸಲು ಮತ್ತು ಸಂವಹನ ಮಾಡಲು ಸಹಾಯ ಮಾಡುತ್ತದೆ.

(2) ಮಕ್ಕಳ ಅರ್ಥ ಮಾಡುವ ಪ್ರಕ್ರಿಯೆಯನ್ನು ಕಲಿಸುವಲ್ಲಿ ಅದು ಒಂದು ಇತ್ಯಾತ್ಮಕ ಪಾತ್ರವನ್ನು ವಹಿಸುತ್ತದೆ.

(3) ಮಾತೃಭಾಷೆಯು ಕಲಿಸುವ ವಿಧಾನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

(4) ದ್ವಿತೀಯ ಭಾಷೆಯನ್ನು ಅದು ಗಮನ ಹರಿಸದಂತೆ ಮಾಡುತ್ತದೆ.

144. ಪ್ರಾಥಮಿಕ ಘಟ್ಟದಲ್ಲಿ ಮಗುವಿನ ಭಾಷಾ ಬೆಳವಣಿಗೆಯಲ್ಲಿ ಯಾವುದು ಅತ್ಯಂತ ಪ್ರಮುಖವಾದದ್ದು ?

(1) ವ್ಯಾಕರಣದ ಜ್ಞಾನ

(2) ಭಾಷಾ ಶ್ರೀಮಂತಿಕೆಯ ಪರಿಸರ

(3) ಭಾಷೆಯ ಪಠ್ಯಪುಸ್ತಕ

(4) ಮಗುವಿನ ಮೌಲ್ಯಾಂಕನ

145. ‘ಪೋರ್ಟ್‌ಫೋಲಿಯೊ’ – ಇದು ಈ ಕೆಳಗಿನವುದರ ಉದಾಹರಣೆ :
(1) ಸ್ವಯಂ ಮೌಲ್ಯಮಾಪನ
(2) ಅಧ್ಯಾಪಕ ಮೌಲ್ಯಮಾಪನ
(3) ಸ್ವಯಂ ಹಾಗೂ ಅಧ್ಯಾಪಕ ಮೌಲ್ಯಮಾಪನ
(4) ರಾಜ್ಯ ಶಿಕ್ಷಣ ಬೋರ್ಡ್‌ನ ಮೌಲ್ಯಮಾಪನ

146. ‘ಕ್ರಾಸ್‌ವರ್ಡ್’ ಆಟವು ಈ ಕೆಳಗಿನದನ್ನು ವರ್ಧಿಸುತ್ತದೆ
(1) ಕೇಳುವ ಕೌಶಲ್ಯ
(2) ಬರಹದ ಕೌಶಲ್ಯ
(3) ಶಬ್ದಕೋಶ ಸಾಮರ್ಥ್ಯ
(4) ಸಾಹಿತ್ಯಕ ಅರ್ಥ

147. ಮಾತನಾಡುವ ಚಟುವಟಿಕೆಯನ್ನು ಮಾಪನ ಮಾಡುವಾಗ ಈ ಕೆಳಗಿನವುಗಳಲ್ಲಿ ಯಾವುದು ಬೇಕಾಗಿಲ್ಲ ?
(1) ಧ್ವನಿ / ಪದಗಳ ಉಚ್ಚಾರ
(2) ಸಂದರ್ಭದಲ್ಲಿ ಸರಿಯಾದ ಪದರೂಪಗಳನ್ನು ಬಳಸುವುದು
(3) ಶಬ್ದಕೋಶ ಹಾಗೂ ಸಮಾನಾರ್ಥಕ ಪದಕೋಶದ ಬಳಕೆ
(4) ಮಾತಿನ ಸ್ಫುಟತೆ

148. ಭಾಷೆಯ ವರ್ಣಮಾಲೆಯ ಜೊತೆಗೆ ಅದರ ಧ್ವನಿಯನ್ನು ಕೂಡಿಸಿ ಓದುವ ಬಗೆಯನ್ನು ಕಲಿಸುವ, ವಿಧಾನವನ್ನು ಹೀಗೆ ಕರೆಯುತ್ತಾರೆ
(1) ನೇರ ವಿಧಾನ
(2) ಸ್ವನಾತ್ಮಕ ವಿಧಾನ
(3) ಪೂರ್ಣ ಭಾಷೆ
(4) ಪಾರ್ಶ್ವಿಕ ಭಾಷೆ

149. ಪಠ್ಯಪುಸ್ತಕದ ಆಚೆಗೆ ದಾಟಿ ಹೋಗುವುದು ಅಂದರೆ :
(1) ಪಠ್ಯಪುಸ್ತಕ ಮಾತ್ರವಲ್ಲದೆ ಪೂರಕವಾದ ಕಲಿಕೆಯ ಸಾಮಗ್ರಿಯನ್ನು ಒದಗಿಸುವುದು.
(2) ಪಠ್ಯಪುಸ್ತಕವನ್ನು ಕಡೆಗಣಿಸಿ, ಅದರಾಚೆಗೆ ಹೋಗುವುದು.
(3) ಜ್ಞಾನವು ಪಠ್ಯಕೇಂದ್ರಿತವಾದ ಕ್ರಿಯೆ ಆಗಬೇಕು.
(4) ಪಠ್ಯಪುಸ್ತಕದ ಆಚೆಗೆ ಮಕ್ಕಳಿಗೆ ಅತಿಹೊರೆಯನ್ನು ಮಾಡದೇ ಇರುವುದು.

150. ಮೂರನೆಯ ತರಗತಿಯ ಮಕ್ಕಳಿಗೆ ಅಧ್ಯಾಪಿಕೆಯು ಲಕೋಟೆಯನ್ನು ತಯಾರಿಸಲು ಹೇಳುವಳು. ವಿದ್ಯಾರ್ಥಿಗಳು ಅವಳ ಮಾತನ್ನು ಅನುಸರಿಸುವರು. ಭಾಷಾ ತರಗತಿಯಲ್ಲಿ ಈ ಚಟುವಟಿಕೆಯು ವಿದ್ಯಾರ್ಥಿಗಳಿಗೆ ಈ ಕಾರಣಕ್ಕಾಗಿ ಅನುಕೂಲವಾಗುತ್ತದೆ :
(1) ಬರವಣಿಗೆಯ ಕೌಶಲ್ಯವನ್ನು ವರ್ಧಿಸುತ್ತದೆ.
(2) ಮಾತಿನ ಕೌಶಲ್ಯವನ್ನು ವರ್ಧಿಸುತ್ತದೆ.
(3) ಕೇಳುವ ಕೌಶಲ್ಯವನ್ನು ವರ್ಧಿಸುತ್ತದೆ.
(4) ಅವರ ಸೃಜನಶೀಲತೆಯನ್ನು ವರ್ಧಿಸುತ್ತದೆ.

www.prepp.in



## SPACE FOR ROUGH WORK

Your Personal Exam Guide

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ ಪುಟ-2 ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ ಬಾಲ್ ಪಾಯಿಂಟ್ ಪೆನ್ ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತು ಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್ ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್ ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರೀ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್ ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್ ನಲ್ಲಿ, ಪರೀಕ್ಷಾರ್ಥಿ ಬೋರ್ಡ್ ನ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್ ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

www.prepp.in

Prepp
Your Personal Exams Guide



**निम्नलिखित निर्देशों को ध्यान से पढ़ें :**

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें ।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **काले/नीले बॉल पॉइन्ट पेन** से भरें । एक बार उत्तर अंकित करने के बाद उसे बदला नहीं जा सकता है ।
3. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ । परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें ।
4. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी ।
5. परीक्षा पुस्तिका / उत्तर पत्र में दिए गए परीक्षा पुस्तिका संकेत व संख्या को परीक्षार्थी सही तरीके से हाज़िरी-पत्र में लिखें ।
6. OMR उत्तर पत्र में कोडित जानकारी को एक मशीन पढ़ेगी । इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए ।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है ।
8. मोबाइल फोन, बेतार संचार युक्तियाँ (स्वीच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए । इस सूचना का पालन न होने पर इसे परीक्षा में अनुचित साधनों का प्रयोग माना जाएगा और उनके विरुद्ध कार्यवाही की जाएगी, परीक्षा रद्द करने सहित ।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें ।
11. कार्यरत निरीक्षक को अपना उत्तर पत्र दिए बिना एवं हाज़िरी-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे । यदि किसी परीक्षार्थी ने दूसरी बार हाज़िरी-पत्र पर हस्ताक्षर नहीं किए, तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा । **परीक्षार्थी अपने बाएँ हाथ के अंगूठे का निशान हाज़िरी-पत्र में दिए गए स्थान पर अवश्य लगाएँ ।**
12. इलेक्ट्रॉनिक / हस्तचालित परिकलक का उपयोग वर्जित है ।
13. परीक्षा हॉल/कक्ष में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं । अनुचित साधनों के सभी मामलों का फैसला बोर्ड के नियमों एवं विनियमों के अनुसार होगा ।
14. किसी हालत में परीक्षा पुस्तिका और उत्तर पत्र का कोई भाग अलग न करें ।
15. **परीक्षा सम्पन्न होने पर, परीक्षार्थी हॉल / कक्ष छोड़ने से पूर्व उत्तर पत्र कक्ष-निरीक्षक को अवश्य सौंप दें । परीक्षार्थी अपने साथ इस परीक्षा पुस्तिका को ले जा सकते हैं ।**

**READ THE FOLLOWING INSTRUCTIONS CAREFULLY:**

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Black/Blue Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet / Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, it will be considered as using unfair means in the examination and action will be taken against them including cancellation of examination.
9. Each candidate must show on demand his / her Admit Card to the Invigilator.
10. No candidate, without special permission of the Centre Superintendent or Invigilator, should leave his / her seat.
11. The candidates should not leave the Examination Hall/Room without handing over their Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet a second time will be deemed not to have handed over the Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic / Manual Calculator is prohibited.
13. The candidates are governed by all Rules and Regulations of the Board with regard to their conduct in the Examination Hall/Room. All cases of unfair means will be dealt with as per Rules and Regulations of the Board.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Hall / Room.** ***The candidates are allowed to take away this Test Booklet with them.***